ಅ) ತುರುವೇಕೆರೆ ತಾಲ್ಲೂಕಿನಲ್ಲಿ ಹೇಮಾವತಿ ನೀರು ಹರಿಯುತ್ತಿದ್ದು, ಇದರ ವ್ಯಾಪ್ತಿಗೆ ಸೇರಿರುವ ಕೆರೆಗಳ ಸಂಖ್ಯೆ ಎಷ್ಟು

ಆ) ಈ ಕೆರೆಗಳ ದುರಸ್ಥಿ ಹಾಗೂ ಚಾನಲ್ ದುರಸ್ಥಿ ಮಾಡದೆ ಎಷ್ಟು ವರ್ಷಗಳಾಗಿವೆ;

ಇ) ಅನೇಕ ಕೆರೆಗಳ ಚಾನಲ್ ದುರಸ್ಥಿ ಮಾಡದೆ ನೂರಾರು ಎಕರೆ ಪ್ರದೇಶದ ರೈತರು ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ವರ್ಷ ಚಾನಲ್ ಹಾಗೂ ಕೆರೆಗಳ ದುರಸ್ಥಿಗೆ ಸರ್ಕಾರ ಹಣ ಮಂಜೂರು ಮಾಡಿಕೊಡುವುದೆ?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಮಂತ್ರಿಗಳು) :—

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಹರಿಯುತ್ತಿರುವ ಹೇಮಾವತಿ ಯೋಜನೆಯ ಕಾಲುವೆಗಳ ಅಚ್ಚುಕಟ್ಟಿನಲ್ಲಿ ಸೇರಿರುವ ಒಟ್ಟು ಕೆರೆಗಳು 66 ಆಗಿರುತ್ತವೆ.

ಆ) ಪ್ರತಿ ವರ್ಷವೂ ಬಿಡುಗಡೆಯಾಗುವ ನಿರ್ವಹಣೆ ಅನುದಾನದಲ್ಲಿ ರಿಪೇರಿ ಕಾರ್ಯಗಳನ್ನು ಮಾಡಿಸಿ ಕಾಲುವೆಯಲ್ಲಿ ನೀರನ್ನು ಹರಿಸಲಾಗುತ್ತಿದೆ.

ಇ) ರೈತರು ಪ್ರತಿಭಟನೆ ಮಾಡಿರುವುದು ಗಮನಕ್ಕೆ ಬಂದಿರುವುದಿಲ್ಲ.

ಈ) 2001-02ನೇ ಸಾಲಿಗೆ ಅನುದಾನ ಬಿಡುಗಡೆ ಮಾಡಲಾಗುವುದು.

ಹಿಂದೂ ದೇವಾಲಯಗಳ ದುರಸ್ಥಿ ಹಾಗೂ ಜೀರ್ಣೋದ್ಧಾರ.

2377(2818) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತುರುವೇಕೆರೆ ತಾಲ್ಲೂಕಿನಲ್ಲಿ ನೂರಾರು ವರ್ಷಗಳ ಹಿಂದೆ ಕಟ್ಟಿರುವ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಹಿಂದೂ ದೇವಾಲಯಗಳು ಇದ್ದು ಈ ದೇವಸ್ಥಾನಗಳ ದುರಸ್ಥಿ ಅಥವಾ ಜೀರ್ಣೋದ್ಧಾರ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

2. ಕೇವಲ ಒಂದು ಅಥವಾ ಎರಡು ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಹಣ ಕೊಟ್ಟು ಉಳಿದ ದೇವಾಲಯಗಳಿಗೆ ಹಣಕೊಡದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಸರ್ಕಾರ ಇದರ ಬಗ್ಗೆ ಆಲೋಚಿಸಿ ಉಳಿದ ದೇವಾಲಯಗಳಿಗೂ ಹಣ ಕೊಡುವ ಕ್ರಮ ತೆಗೆದುಕೊಳ್ಳುವುದೆ? (ವಿವರ ನೀಡುವುದು)

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. ದೇವಾಲಯಗಳ ದುರಸ್ತಿಗಾಗಿ, ಸ್ಥಳೀಯ ಭಕ್ತಾದಿಗಳು ಮತ್ತು ಸಾರ್ವಜನಿಕರು ಮುಂದೆ ಬಂದು ಅಂದಾಜುಪಟ್ಟಿ ತಯಾರಿಸಿ ಅಂದಾಜು ಮೊತ್ತದಲ್ಲಿ ಅರ್ಧದಷ್ಟು ಸಾರ್ವಜನಿಕ ವಂತಿಕೆ ಸಂಗ್ರಹಿಸಿ ಉಳಿದ ಮೊತ್ತಕ್ಕೆ ನಿಯಮಾನುಸಾರ ಸರ್ಕಾರಿ ಅನುದಾನ ಕೋರಿ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿದಲ್ಲಿ ಪರಿಶೀಲಿಸಲಾಗುವುದು.

2. ಆಯ-ವ್ಯಯದಲ್ಲಿ ಒದಗಿಸಿರುವ ಮೊತ್ತಕ್ಕೆ ಮಿತಿಗೊಳಿಸಿ ಬೇಡಿಕೆಯ ಆದ್ಯತೆಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುವುದು.

3. ಭಕ್ತಾದಿಗಳೇ ಮುಂದೆ ಬಂದಲ್ಲಿ ಮಾತ್ರ ಇಂತಹ ಸಮಸ್ಯೆ ನಿವಾರಿಸಬಹುದಾಗಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಹಳದಿ ಕಾರ್ಡು ವಿತರಣೆ

2378(2819)ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ಬದಲಾವಣೆ ಮಾಡಿ, ಹಳದಿ ಕಾರ್ಡುಗಳನ್ನು ಕೊಡುವ ಕಾರ್ಯಕ್ರಮ ಪ್ರಾರಂಭ ಆಗಿದೆಯೇ;

ಆ) ಹಾಗಿದ್ದಲ್ಲಿ, ತುರುವೇಕೆರೆ ತಾಲ್ಲೂಕಿನಲ್ಲಿ ಹಳದಿ ಕಾರ್ಡು ಯಾವಾಗ ಕೊಡಲಾಗುವುದು;

ಇ) ಈಗ ಹಳದಿ ಕಾರ್ಡು ಕೊಡಲು ಸರ್ಕಾರ ಯೋಚಿಸಿರುವ ಬಡವರ ಸಂಖ್ಯೆ ಎಷ್ಟು;

ಈ) ಯಾವ ಆಧಾರದ ಮೇಲೆ ಈ ಬಡವರ ಪಟ್ಟಿ ಮಾಡಲಾಗಿದೆ;

ಉ) ಸರಿಯಾದ ರೀತಿಯಲ್ಲಿ ಸಮೀಕ್ಷೆ ಮಾಡಿ ಬಡವರನ್ನು ಗುರುತಿಸಿ ಪಟ್ಟಿ ಮಾಡಲಾಗಿದೆಯೇ?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಅ) ಪ್ರಾರಂಭವಾಗಿದೆ.

ಆ) ತುರುವೇಕೆರೆ ತಾಲ್ಲೂಕಿನಲ್ಲಿ ಸಹ ಹಳದಿ ಕಾರ್ಡುಗಳನ್ನು ನೀಡಲು ಗ್ರಾಮಸಭೆಗಳಲ್ಲಿ ಫಲಾನುಭವಿಗಳನ್ನು ಗುರುತಿಸುವ ಪ್ರಕ್ರಿಯೆಯು ನಡೆಯುತ್ತಿದ್ದು, ಶೀಘ್ರದಲ್ಲಿಯೇ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು.